‘ಇಲ್ಲಿಯೇ ಯಾಕೆ ನಿಲ್ಲುತ್ತೀರಾ? ಬಸ್‌ಸ್ಟ್ಯಾಂಡ್‌ಗೆ ಬನ್ನಿ. ಅಲ್ಲಿಯೇ ತ್ಯಾಮಗೊಂಡ್ಲು ಬಸ್ ಹತ್ತಬಹುದು’ ಎಂದ ಕಂಡಕ್ಟರ್.

‘ಬೇಡ... ಮತ್ತೆ ಬಸ್‌ಸ್ಟ್ಯಾಂಡ್‌ವರೆಗೆ ಬಂದರೆ ತ್ಯಾಮಗೊಂಡ್ಲುವಿಗೆ ಹೋಗುವ ನನ್ನ ವಿಚಾರ ಬದಲಾಗಲೂಬಹುದು’ ನಗುತ್ತಾ ಅಂದ ನಾನು, ‘ತ್ಯಾಮಗೊಂಡ್ಲು –26 ಕಿ.ಮೀ’ ಎಂದು ಬರೆದಿದ್ದ ಬೋರ್ಡಿನ ಹತ್ತಿರ ಬಂದು ನಿಂತೆ. ಆರೆಂಟು ನಿಮಿಷದಲ್ಲಿ ಬಸ್ ರೆಡಿಯಾಯಿತು. ಬಸ್‌ನಿಂದ ಕೆಳಗೆ ಇಳಿದಿದ್ದವರು ಬುಡಬುಡನೆ ಬಸ್ ಏರಿದರು.

‘ಹ್ಞೂಂ... ನಡಿಯಣ್ಣಾ’ ಎಂದ ಕಂಡಕ್ಟರ್. ನೋಡನೋಡುತ್ತಿದ್ದಂತೆಯೇ ಬಸ್ ಹೊರಟಿತು.

ಬೆಂಗಳೂರು ಹೆದ್ದಾರಿಯಲ್ಲಿ, ತ್ಯಾಮಗೊಂಡ್ಲುಗೆ ತಿರುಗುವ ಅಡ್ಡ ರಸ್ತೆಯಲ್ಲಿ ‘ತ್ಯಾಮಗೊಂಡ್ಲು – 26 ಕಿ.ಮೀ.’ ಬೋರ್ಡ್ ಬಳಿ ನಾನು ನಿಂತಿದ್ದೆ. ಒಬ್ಬಂಟಿಯಾಗಿ ನಿಂತಿದ್ದೆ. ಅಲ್ಲಿಯೇ ಆಚೆ ತುಸು ದೂರದಲ್ಲಿ ಮಲಗಿದ್ದ ನಾಯಿಗಳಲ್ಲಿ ಒಂದೆರಡು ‘ಇಂವಾ ಇಲ್ಲಿ ಯಾಕೆ ನಿಂತಾ? ಹೋಗೋ ಬಸ್‌ನಲ್ಲಿ ಯಾಕೆ ಹೋಗಲಿಲ್ಲಾ?’ ಎನ್ನುವಂತೆ ಒಂದೆರಡು ಬಾರಿ ನನ್ನತ್ತ ನೋಡಿದವು. ಮತ್ತೆ ಹಾಗೆಯೇ ನೆಲಕ್ಕೆ ತಮ್ಮ ಮೂತಿ ಚಾಚಿ ಬಿದ್ದುಕೊಂಡವು.

ತ್ಯಾಮಗೊಂಡ್ಲುವಿಗೆ ಹೋಗುವ ಬಸ್ ಎಷ್ಟು ಹೊತ್ತಿಗೆ ಬರುತ್ತದೆಯೋ ಏನೋ? ಅಥವಾ ಈ ದಾರಿಯಾಗಿ ಬರದೇ ಮತ್ತೆ ಬೇರೆ ಯಾವುದಾದರೂ ದಾರಿಯಲ್ಲಿ ಹೋಗುತ್ತದೆಯೋ? ಕೇಳುವುದು ಯಾರನ್ನು? ಒಂದೇ ಒಂದು ನರಪಿಳ್ಳೆಯೂ ಕಾಣುತ್ತಿಲ್ಲ. ಅಲ್ಲಾ... ಈ ಬೆಳ್ಳಂ ಬೆಳಗ್ಗೆ ಯಾರಾದರೂ ಯಾಕಾದರೂ ಇತ್ತ ಬರುತ್ತಾರೆ? ಆ ಕಂಡಕ್ಟರ್ ಹೇಳಿದಂತೆ ನಾನು ಬಸ್‌ಸ್ಟ್ಯಾಂಡ್‌ಗೇ ಹೋಗಬೇಕಾಗಿತ್ತು. ಅಲ್ಲಿ ಕ್ಯಾಂಟೀನ್‌ನಲ್ಲಿ ಬಿಸಿ ಬಿಸಿ ಕಾಫಿ ಕುಡಿದು ತ್ಯಾಮಗೊಂಡ್ಲು ಬಸ್ ಹತ್ತಬೇಕಾಗಿತ್ತು... ಎನ್ನಿಸಿತು. ನಿಂತೆ.

ಕಾದೆ. ಕಾಯುತ್ತಾ ನಿಂತಿದ್ದೆ. ಹತ್ತು ಹದಿನೈದು ನಿಮಿಷ ಕಾದಿರಬೇಕು. ನಿಧಾನವಾಗಿ ಬೆಳಕು ಮೂಡುತ್ತಿತ್ತು. ಅಲ್ಲೊಬ್ಬರು ಇಲ್ಲೊಬ್ಬರು ಸುಳಿದಾಡತೊಡಗಿದ್ದರು. ತಲೆಗೆ ಟವೆಲ್ ಸುತ್ತಿಕೊಂಡು ಬಿರಬಿರನೆ ಹೋಗುತ್ತಿದ್ದ ಒಬ್ಬನನ್ನು ಕರೆದೆ: ‘ಅಣ್ಣಾ, ತ್ಯಾಮಗೊಂಡ್ಲುವಿಗೆ ಹೋಗೋ ಬಸ್ ಬರುತ್ತಾ ಇಲ್ಲಿಗೆ? ಎಷ್ಟು ಗಂಟೆಗೆ ಬರುತ್ತೆ?’ ಹೋಗುತ್ತಿದ್ದವ ನನ್ನ ಕರೆ ಕೇಳಿ ನಿಂತ. ನನ್ನತ್ತ ನೋಡಿದ. ನಾಲ್ಕು ಹೆಜ್ಜೆ ನನ್ನತ್ತ ಬಂದ.

‘ತ್ಯಾಮಗೊಂಡ್ಲಿಗಾ? ಈಗ ಟೇಮೆಸ್ಟು?’ ಆತ ತಿರುಗಿ ನನ್ನನ್ನೇ ಕೇಳಿದ.

‘ಹೌದು... ತ್ಯಾಮಗೊಂಡ್ಲಿಗೆ’ ಎಂದ ನಾನು, ‘ಆರೂಕಾಲಾಯಿತು’ ಎಂದೆ.

‘ಆರೂವರೆಗೆ ಬಸ್ ಐತೆ. ಇನ್ನೇನ ಬರೋ ಒತ್ತು’ ಎಂದವನೇ ಮತ್ತೆ ಮಾತಿಗೆ ಅವಕಾಶ ಕೊಡದೆ ಬಿರಬಿರನೆ ನಡೆದ.

ಮತ್ತೆ ಕಾದೆ... ಆತ ಹೇಳಿದ ಆರೂವರೆ ಆಯಿತು. ಮತ್ತೆ ಹತ್ತು ನಿಮಿಷವೂ ಕಳೆಯಿತು. ಇಲ್ಲ... ಯಾವ ಬಸ್ಸೂ ಇಲ್ಲ. ಈಗ ನಾನು ನಿಂತಲ್ಲಿಯೇ ಮತ್ತೆ ಮೂರ್ನಾಲ್ಕು ಮಂದಿ ಬಂದು ನಿಂತರು. ಅವರಲ್ಲಿ ಇಬ್ಬರು ಹೆಂಗಸರೂ ಇದ್ದರು. ವಿಚಾರಿಸಿದಾಗ ಅವರೆಲ್ಲರೂ ತ್ಯಾಮಗೊಂಡ್ಲುವಿಗೆ ಹೋಗುವವರೇ ಎನ್ನುವುದು ತಿಳಿಯಿತು. ನನಗೆ ಸಮಾಧಾನವಾಯಿತು. ಅಂತೂ ಏಳೂಕಾಲರ ಹೊತ್ತಿಗೆ ಬಸ್ ಬಂತು. ಬಸ್ ಹತ್ತಿ ತ್ಯಾಮಗೊಂಡ್ಲು ಟಿಕೆಟ್ ತೆಗೆದುಕೊಂಡದ್ದೂ ಆಯಿತು. ಇಪ್ಪತ್ತಾರು ಕಿಲೋಮೀಟರ್ ದೂರ ಕ್ರಮಿಸಲು ಆ ಬಸ್ ತೆಗೆದುಕೊಂಡದ್ದು ಕೇವಲ ಎರಡು ಗಂಟೆ ಮಾತ್ರಾ! ಅಲ್ಲಲ್ಲಿ ನಿಲ್ಲುತ್ತಿತ್ತು; ಇಳಿಯುವವರನ್ನು ಇಳಿಸುತ್ತಿತ್ತು; ಹತ್ತುವವರನ್ನು ಹತ್ತಿಸಿಕೊಳ್ಳುತ್ತಿತ್ತು. ಅಂತೂ ಒಂಬತ್ತೂವರೆಯ ವೇಳೆಗೆ ಬಸ್ ತ್ಯಾಮಗೊಂಡ್ಲುವಿನ ಬಸ್‌ಸ್ಟ್ಯಾಂಡ್ ಬಳಿ ಬಂದು ನಿಂತಿತು. ಬಸ್‌ನಿಂದ ಇಳಿದವನೇ ಸಮೀಪದ ಕ್ಯಾಂಟೀನ್ ಒಂದಕ್ಕೆ ಹೋದೆ. ಎರಡು